# ತ್ಸಂಗ್‌ಯಾಂಗ್‌ನ ಕೆಲವು ಕವಿತೆಗಳು

ಅದೃಷ್ಟವಿದ್ದು ಮರಳುವಂತಿದ್ದರೆ
ನನ್ನೂರಿಗೆ, ನೆಟ್ಟು ಹಾರಿಸುತ್ತಿದ್ದೆ
ಪ್ರಾರ್ಥನೆಯ ಪತಾಕೆಗಳನ್ನು
ಮೈದುಂಬಿದ ತರುಣಿಯರು
ಅಲ್ಲಿ ಆಹ್ವಾನಿಸುವರು
ತಮ್ಮ ಮನೆಗೆ ನನ್ನನ್ನು

★★★

ಅವಳು ನನ್ನವಳಾಗಿದ್ದಾಗ
ಅಮೂಲ್ಯ ಸಂಪತ್ತು
ತಕ್ಕಷ್ಟು ಜಾಗ್ರತೆ ಮಾಡಲಿಲ್ಲ
ಇಂದವಳು ಅನ್ಯರ ಸ್ವತ್ತು
ನನ್ನ ಪಾಲಿಗುಳಿದ ಸಾಂತ್ವನವೆಂದರೆ
ನೋವು, ಬರಿಯ ನೋವು

★★★

ಬೆಟ್ಟಗಳನ್ನಲೆಯುವ ಕಾಡುಕುದುರೆಗೂ
ಮೂಗುದಾರವಿದೆ,
ಜೇರುಗುಣಿಕೆಯ ನಿಯಂತ್ರಣವಿದೆ
ತಿರುಗಿಬಿದ್ದ
ನನ್ನಿನಿಯಳಿಗೆ
ಅವಳ ಲಾವಣ್ಯವೂ ನೆರವಾಗದು

★★★

ಚೆಲುವೆ ಕೊನೆಯುಸಿರೆಳೆಯದ ಹೊರತು
ಬಟ್ಟಲಿಗೆ ಅವಳು
ಸುರಿವ ಸುರೆ ನಿಲ್ಲದು
ಖಚಿತವಾಗಿ ಹೇಳಬಲ್ಲೆ
ತರುಣನೊಬ್ಬನ
ಸುರಕ್ಷಿತ ಸ್ವರ್ಗ ಅವಳು

★★★

ನಕ್ಷೆಗಳನ್ನು ಚಿತ್ರಿಸುತ್ತ
ನಕ್ಷತ್ರಗಳನ್ನು ಅಳೆಯಬಲ್ಲೆ,
ಕುಳಿತೇ ಭೂಮಿಯ ಮೇಲೆ
ನವಿರು ಅಂಗಾಂಗಗಳ
ಪರಿಚಯವಿದ್ದರೂ ನಾನವಳ
ಮನದಾಳ ಅಳೆಯಲಾರೆ

ಒಂದಕ್ಕಾದರೂ ಅಂಟಿಕೊಳ್ಳದ, ಎರಡರಿಂದಲೂ ದೂರವಾಗದ ವಿಷಮ ಸಂದಿಗ್ಧತೆಯಲ್ಲಿ ಒಂಬತ್ತು ವರ್ಷಗಳು ಅವನ ಆಯುಷ್ಯದ ಲೆಕ್ಕಕ್ಕೆ ಸಂದು ಹೋದವು.

## ಮತ್ತೆ ಮತ್ತೆ ಎದ್ದು ಬರುವ ಆತ್ಮ

ದಲಾಯಿ ಲಾಮಾರನ್ನು ನೇಮಿಸುವ ವ್ಯವಸ್ಥೆ ಬಂದ ಮೇಲೆ ಟಿಬೆಟ್ ಅಪೂರ್ವ ಸ್ಥಿರತೆಯನ್ನು ಕಂಡಿತು. ಅವರು ನೂತನ ಅಧಿಕಾರ ಕೇಂದ್ರವಾಗಿ ಹಿಡಿತ ಸಾಧಿಸಿದರು. ಅರಸರಿಗಿಂತಲೂ ಹೆಚ್ಚಾಗಿ ಜನಪ್ರಿಯರೆನಿಸಿದರು. ಟಿಬೆಟಿನ ಮೇಲೆ ಮೊದಲಿಂದಲೂ ಕಣ್ಣಿಟ್ಟಿದ್ದ ಚೀನಾ ಹಾಗೂ ಮಂಗೋಲ್ ಚಕ್ರಾಧಿಪತ್ಯಗಳು ತಮಗೊಬ್ಬ ಜನಪ್ರಿಯ ಪ್ರತಿಸ್ಪರ್ಧಿ ರೂಪುಗೊಂಡಿದ್ದನ್ನು ಸಹಿಸಲಿಲ್ಲ. ಮಿಲಿಟರಿ ರಕ್ಷಣೆಯ ನೆಪ ಮಾಡಿಕೊಂಡು ತಮ್ಮ ರಾಜಪ್ರತಿನಿಧಿಗಳ ಮೂಲಕ ದಲಾಯಿ ಲಾಮಾನ ಅಧಿಕಾರ ವ್ಯಾಪ್ತಿಯೊಳಗೆ ಮೂಗು ತೂರಿಸಲು ಅವು ಉಪಕ್ರಮಿಸಿದವು. ಹೇಗೋ ಮೊದಲ ಐದು ಮಂದಿ ದಲಾಯಿ ಲಾಮಾರ ಕಾಲದಲ್ಲಿ ಅವಕ್ಕೆ ಷಡ್ಯಂತ್ರಗಳನ್ನು ಹೆಣೆಯಲು ಅವಕಾಶ ಸಿಕ್ಕಿರಲಿಲ್ಲ. ಈಗ ತ್ಸಂಗ್‌ಯಾಂಗ್‌ನ ಅವಧಿ ಹೇರಳ ಸಬೂಬುಗಳನ್ನು ಸೃಷ್ಟಿಸಿತು. ಬ್ರಹ್ಮಚರ್ಯಕ್ಕೆ